# ದೇಶೀ ಸಕ್ಕರೆ ಉತ್ಪಾದನೆ 2015–16ರಲ್ಲಿ 26 ಮಿಲಿಯನ್ ಟನ್‌ಗೆ ಇಳಿಕೆಯಾಗುವ ಸಂಭವ

ಕೇಂದ್ರ ಸರಕಾರ ಈ ವರ್ಷ ದೇಶದ ಒಟ್ಟು ಸಕ್ಕರೆ ಉತ್ಪಾದನೆ ಹಿಂದಿನ ವರ್ಷದ ಒಟ್ಟು ಉತ್ಪಾದನೆಯಾದ 28.1 ಮಿಲಿಯನ್ ಟನ್‌ಗಳಿಂದ ಸುಮಾರು 2 ಮಿಲಿಯನ್ ಟನ್‌ಗಳಷ್ಟು ಇಳಿಕೆಯಾಗಿ 26 ಮಿಲಿಯನ್‌ಗಳಾಷ್ಟಾಗ ಬಹುದೆಂದು ಅಂದಾಜಿಸಿದೆ. ಮಹಾರಾಷ್ಟ್ರ ಮತ್ತು ಕರ್ನಾಟಕಗಳಲ್ಲಿ ಮುಂಗಾರು ಮಳೆ ಕಡಿಮೆಯಾಗಿದ್ದು, ಒಟ್ಟು ಕಬ್ಬು ಉತ್ಪಾದನೆಯಲ್ಲಿ ಇಳಿಕೆಯಾಗಬಹುದಾದ್ದರಿಂದ ಇಲ್ಲಿನ ಸಕ್ಕರೆ ಉತ್ಪಾದನೆ ಕಡಿಮೆಯಾಗುವ ನಿರೀಕ್ಷೆಯಿಂದ ಒಟ್ಟು ದೇಶೀ ಉತ್ಪಾದನೆ ಇಳಿಕೆಯಾಗಲಿದೆಯೆನ್ನಲಾಗಿದೆ. ಇದು ಇಸ್ಮಾ ಈ ವರ್ಷದ ಒಟ್ಟು ಉತ್ಪಾದನಾ ಅಂದಾಜಾದ 27 ಮಿಲಿಯನ್ ಟನ್‌ಗಳಿಗಿಂತ ತುಂಬಾ ಕಡಿಮೆಯಾಗಿದೆ.

ದೇಶದ ಪ್ರಮುಖ ಸಕ್ಕರೆ ಉತ್ಪಾದನಾ ರಾಜ್ಯವಾದ ಮಹಾರಾಷ್ಟ್ರದಲ್ಲಿ ಸಕ್ಕರೆ ಉತ್ಪಾದನೆ ಹಿಂದಿನ ವರ್ಷದ 10.51 ಮಿಲಿಯನ್ ಟನ್‌ಗಳಿಂದ ಈ ವರ್ಷ 8.6 ಮಿಲಿಯನ್ ಟನ್‌ಗಳಿಗೆ ಇಳಿಕೆಯಾಗಬಹುದೆನ್ನಲಾಗಿದೆ. ರಾಜ್ಯದ ಒಟ್ಟು ಕಬ್ಬು ಉತ್ಪಾದನೆ ಹಿಂದಿನ ವರ್ಷ 102.2 ಮಿಲಿಯನ್ ಟನ್‌ಗಳಿಂದ ಈ ವರ್ಷ 83.6 ಮಿಲಿಯನ್ ಟನ್‌ಗಳಿಗೆ ಇಳಿಕೆಯಾಗಬಹುದೆನ್ನಲಾಗಿದ್ದು, ಇದರಿಂದ ಸಕ್ಕರೆ ಉತ್ಪಾದನೆಯಲ್ಲೂ ಇಳಿಕೆಯಾಗಬಹುದು. ಕರ್ನಾಟಕದಲ್ಲಿ 2015–16ರ ಉತ್ಪಾದನೆ ಹಿಂದಿನ ವರ್ಷದ ಉತ್ಪಾದನೆಯಾದ 5 ಮಿಲಿಯನ್ ಟನ್‌ಗಳಿಂದ 4 ಮಿಲಿಯನ್ ಟನ್‌ಗಳಿಗೆ ಇಳಿಕೆಯಾಗಬಹುದೆನ್ನಲಾಗಿದೆ. ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ಕಬ್ಬು ಬೆಳೆ ಮಳೆ ನೀರನ್ನವಲಂಬಿಸಿದ್ದು, ಉತ್ತರ ಪ್ರದೇಶದಲ್ಲಿ ನೀರಾವರಿಯಿದೆ. ಇದರಿಂದ ಉತ್ತರಪ್ರದೇಶದ ಕಬ್ಬು, ಸಕ್ಕರೆ ಉತ್ಪಾದನೆ ಹಿಂದಿನ ವರ್ಷಕ್ಕಿಂತ ಸ್ವಲ್ಪ ಮಟ್ಟಿಗೆ ಹೆಚ್ಚಳವಾಗಬಹುದೆನ್ನಲಾಗಿದೆ.